(ತೋಟಗಾರಿಕೆ ಇಲಾಖೆ)

ಸಂಖ್ಯೆ:ತೋಇ:ಆ:ಸಿ:ವಿನಿ3:38:2019-20

ತೋಟಗಾರಿಕೆ ನಿರ್ದೇಶನಾಲಯ,
ಲಾಲ್ ಬಾಗ್, ಬೆಂಗಳೂರು-04,
ದಿನಾಂಕ: 21 -08-2019.

## "ಕಛೇರಿ ಆದೇಶ"

ವಿಷಯ: -ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ದಿ:15-05-2019ಕ್ಕೆ ಇರುವಂತೆ ಗ್ರೂಪ್-"ಬಿ" ಪತ್ರಾಂಕಿತ ವ್ಯವಸ್ಥಾಪಕ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:-1)ಸರ್ಕಾರದ ಆದೇಶ ಸಂಖ್ಯೆ:-ಸಿಆಸುಇ:186:ಎಸ್ ಆರ್ ಎಸ್:2018, ದಿನಾಂಕ:27.02.2019.
2) ಸರ್ಕಾರದ ಆದೇಶ ಸಂಖ್ಯೆ:-ಸಿಆಸುಇ:186: ಎಸ್ ಆರ್ ಎಸ್:2018, ದಿನಾಂಕ:15.05.2019.
3)ಸರ್ಕಾರದ ಸುತ್ತೋಲೆ ಸಂಖ್ಯೆ:-ಸಿಆಸುಇ:3: ಎಸ್ ಆರ್ ಎಸ್:2019, ದಿನಾಂಕ:04.06.2019.
4) ನಿರ್ದೇಶನಾಲಯದ ಆದೇಶದ ಸಮ ಸಂಖ್ಯೆಯ ದಿನಾಂಕ:26.06.2019.

--*****--

ಉಲ್ಲೇಖಿದ ಸರ್ಕಾರಿ ಆದೇಶದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:2368/2011-ಬಿ.ಕೆ.ಪವಿತ್ರ ಮತ್ತು ಇತರರ ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ. ಸಂಖ್ಯೆ:1151/2018ರಲ್ಲಿ ದಿನಾಂಕ:10.05.2019ರಂದು ಅಂತಿಮ ತೀರ್ಪು ಪ್ರಕಟಿಸಿರುತ್ತದೆ. ಆದ್ದರಿಂದ ಉಲ್ಲೇಖ(1)ರ ಸರ್ಕಾರಿ ಆದೇಶದ ಕಂಡಿಕೆ 8ರ ಉಪ ಕಂಡಿಕೆ(1) ಮತ್ತು (2)ರನ್ವಯ ಕರ್ನಾಟಕ ರಾಜ್ಯ ಸಿವಿಲ್ ಸೇವಾ ( ಮುಂಬಡ್ತಿ , ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ 1973ರ ಸೆಕ್ಷನ್ 4,5 ಮತ್ತು 6ನ್ನು ಸೆಕ್ಷನ್ 9 ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ ಮತ್ತು ಅಂತಿಮ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ ಅರ್ಹತಾ ದಿನಾಂಕಗಳನ್ನು ನಿಗಧಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗಧಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಎಂದು ತಿಳಿಸಲಾಗಿರುತ್ತದೆ.

ಈ ಬಗ್ಗೆ ಪರಿಶೀಲಿಸಲಾಗಿ,ಉಲ್ಲೇಖ (1), (2) ಹಾಗೂ (3)ರಲ್ಲಿ ನಿರ್ದೇಶಿಸಿದ ಸರ್ಕಾರದ ಮಾರ್ಗದರ್ಶನದ ಆಧಾರದ ಮೇಲೆ ತೋಟಗಾರಿಕೆ ಇಲಾಖೆಯಲ್ಲಿ ದಿನಾಂಕ:15.05.2019ಕ್ಕೆ ಇರುವಂತೆ "ಗ್ರೂಪ್-"ಬಿ" ಪತ್ರಾಂಕಿತ ವ್ಯವಸ್ಥಾಪಕ" ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(4)ರಲ್ಲಿನ ಅನುಬಂಧ-2ರಲ್ಲಿ ಪ್ರಕಟಿಸಿ, ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ/ಸಲಹೆಗಳೇನಾದರೂ ಇದ್ದಲ್ಲಿ ಸಂಬಂಧಿಸಿದ ಪತ್ರಾಂಕಿತ ವ್ಯವಸ್ಥಾಪಕ, ರವರುಗಳು(ವಯೋನಿವೃತ್ತಿ ಹೊಂದಿದ ಪತ್ರಾಂಕಿತ ವ್ಯವಸ್ಥಾಪಕರು ಸೇರಿದಂತೆ) ಈ ಬಗ್ಗೆ 15 ದಿವಸದೊಳಗಾಗಿ ಆಕ್ಷೇಪಣೆ ಸಮರ್ಥಿಸಲು ಅಗತ್ಯ ದಾಖಲಾತಿಗಳೊಂದಿಗೆ ತಪ್ಪದೇ ನಿರ್ದೇಶನಾಲಯಕ್ಕೆ ಸಲ್ಲಿಸಲು ತಿಳಿಸಲಾಗಿತ್ತು. ನಿಗಧಿತ ಅವಧಿ ನಂತರ ವಿಳಂಬವಾಗಿ ಬಂದ ಹಾಗೂ ದಾಖಲೆ ರಹಿತ ಬಂದಂತಹ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸೂಚಿಸಲಾಗಿತ್ತು.

ಪು.ತಿ.ನೋ

## ಅನುಬಂಧ-2

**ದಿನಾಂಕ:15.05.2019ಕ್ಕೆ ಇರುವಂತೆ ಗ್ರೂಪ್- "ಬಿ" ಪತ್ರಾಂಕಿತ ವ್ಯವಸ್ಥಾಪಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ.**

| ಕ್ರ. ಸಂ | ಹೆಸರು (ಶ್ರೀಮತಿ/ಶ್ರೀಯುತರಾದ) | ಮೀಸಲಾತಿ ಪ್ರವರ್ಗ | ನೇರ ನೇಮಕಾತಿ/ ಮುಂಬಡ್ತಿ/ ಇತರೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೈಜವಾಗಿ ಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1. | ಆರ್.ಎಸ್.ಚವ್ಹಾಣ್ | ಪರಿಶಿಷ್ಟಜಾತಿ | ಮುಂಬಡ್ತಿ | 24-08-1950 | 15-04-1977 | 27-05-1999 | 27-05-1999 |
| 2. | ಗುಜ್ಜುಲ ರಾಮಣ್ಣ | ಪರಿಶಿಷ್ಟ ಪಂಗಡ | ಮುಂಬಡ್ತಿ | 25-06-1960 | 16-07-1985 | 27-05-1999 | 27-05-1999 |
| 3. | ಯು.ಐ.ನಾಯಕ್ | ಪರಿಶಿಷ್ಟಜಾತಿ | ಮುಂಬಡ್ತಿ | 01-06-1953 | 15-04-1977 | 30-03-2010 | 30-03-2010 |
| 4. | ಟಿ.ಎನ್.ನಾರಾಯಣ | ಪರಿಶಿಷ್ಟಜಾತಿ | ಮುಂಬಡ್ತಿ | 02-03-1955 | 31-10-1981 | 22-09-2011 | 22-09-2011 |
| 5. | ಬಿ.ಸಂಜೀವಯ್ಯ | ಪರಿಶಿಷ್ಟಜಾತಿ | ಮುಂಬಡ್ತಿ | 01-06-1956 | 31-10-1981 | 10-07-2013 | 10-07-2013 |
| 6. | ಪಿ.ಆರ್. ರಮೇಶ್ | ಸಾಮಾನ್ಯ | ಮುಂಬಡ್ತಿ | 13-08-1955 | 31-10-1981 | 10-07-2013 | 10-07-2013 |
| 7. | ಎನ್.ಪಿ.ಕಂಬಳಿ | ಸಾಮಾನ್ಯ | ಮುಂಬಡ್ತಿ | 01-12-1955 | 31-10-1981 | 15-06-2015 | 15-06-2015 |
| 8. | ಎನ್.ಜಿ. ಶಶಿಕುಮಾರ್ | ಸಾಮಾನ್ಯ | ಮುಂಬಡ್ತಿ | 10-05-1962 | 16-07-1985 | 15-06-2015 | 15-06-2015 |
| 9. | ನಾಗರಾಜ್ | ಪರಿಶಿಷ್ಟ ಪಂಗಡ | ಮುಂಬಡ್ತಿ | 09-08-1957 | 16-07-1985 | 26-12-2015 | 26-12-2015 |
| 10. | ಪಿ.ದೇವಕಿ | *ಪರಿಶಿಷ್ಟಜಾತಿ | ಮುಂಬಡ್ತಿ | 01-06-1964 | 16-09-1988 | 12-05-2016 | 12-05-2016 |
| 11. | ಆರ್.ಕೆ.ಸಿದ್ದಲಿಂಗಪ್ಪ | ಪರಿಶಿಷ್ಟ ಪಂಗಡ | ಮುಂಬಡ್ತಿ | 01-06-1959 | 13-07-1988 | 11-07-2018 | 11-07-2018 |

** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ: 186: ಎಸ್ ಆರ್ ಎಸ್: 2018 ದಿ:15.05.2019 ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ:3:ಎಸ್ ಆರ್ ಎಸ್:2019, ದಿ:04.06.2019 ರನ್ವಯ ಈ ಹಿಂದೆ ಮೀಸಲಾತಿ ಆಧಾರದ ಮೇಲೆ ನೀಡಿದ ಬಡ್ತಿಯನ್ನು ಪೋಷಕ ವೃಂದದ ಜೇಷ್ಠತಾನುಸಾರ ಪುನರ್ ಅವಲೋಕಿಸಿ ಪರಿಷ್ಕೃತ ಅರ್ಹತಾದಿನಾಂಕವನ್ನು ನಿಯಮಾನುಸಾರ ನಿಗಧಿಪಡಿಸಿದೆ.

ನಿರ್ದೇಶಕರು